ದಿನಾಂಕಃ 26-10-2017 ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು. -

ಮುಂದುವರೆದ ಮುಖ್ಯ ವಿಚಾರಣೆಃ– ಶ್ರೀ. ಬಿ ವಿ ವಕೀಲರಿಂದ ಃ-

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ಸಹಿಗಳು ನನ್ನವೇ ಇರುತ್ತವೆ.

ವಾದಿ ಅಂದರೆ ನನ್ನ ತಂದೆ ನನ್ನ ಹೆಸರಿಗೆ ಬರೆದುಕೊಟ್ಟ ಒಟ್ಟು ಮುಕ್ತಿಯಾರ ಪತ್ರವನ್ನು ನಿಪಿ-1 ಎಂದು ಗುರುತಿಸಲಾಯಿತು. ದಿನಾಂಕ ಃ 31-3-2016 ರ ಕ್ರಯ ಪತ್ರದ ಧೃಡೀಕೃತ ನಕಲನ್ನು ನಿಪಿ-2 ಎಂದು ಗುರುತಿಸಲಾಯಿತು. ಓಎಸ್-29/2013 ರ ವಾದ ಪತ್ರ, ಪ್ರತಿವಾದ ಪತ್ರ, ಮೇಮೊ, ರಾಜೀ ಅರ್ಜಿ, ರಾಜೀ ಡಿಕ್ರಿಗಳ ಧೃಡೀಕೃತ ನಕಲುಗಳನ್ನು ನಿಪಿ-3 ರಿಂದ 7 ಎಂದು ಗುರುತಿಸಲಾಯಿತು. ವಾದಿ ಕೂಡ್ಲಿಗಿ ಪಟ್ಟಣ ಪಂಚಾಯ್ತಿಗೆ ಕೊಟ್ಟ ದಿನಾಂಕ ಃ 7-4-2016 ರ ಅರ್ಜಿಯ ನಕಲನ್ನು ನಿಪಿ-8 ಎಂದು, ಅದಕ್ಕೆ ಸದರಿ ಪಂಚಾಯ್ತಿಯವರು ಕೊಟ್ಟ ಹಿಂಬರಹವನ್ನು ನಿಪಿ-9 ಎಂದು, ವಾದಿ ಉಪನೊಂದಣಾಧಿಕಾರಿ, ಕೂಡ್ಲಿಗಿ ಅವರಿಗೆ ಕೊಟ್ಟ ಅರ್ಜಿಯ ನಕಲನ್ನು ನಿಪಿ-10 ಎಂದು, ದಿನಾಂಕಃ 9-9-2002 ರ ಸ್ವಾಧೀನ ರಹಿತ ಕ್ರಯದ ಕರಾರು ಪತ್ರದ ಧೃಡೀಕೃತ ನಕಲನ್ನು ನಿಪಿ-11 ಎಂದು, ಓಎಸ್-62/2014 ರ ರೋಜನಾಮೆ, ವಾದ ಪತ್ರಗಳ ಧೃಡೀಕೃತ ನಕಲುಗಳನ್ನು ನಿಪಿ-12 ಮತ್ತು 13, ಓಎಸ್-64/14 ರ ಮಧ್ಯಸ್ಥಿಕೆಯ ರೋಜನಾಮೆ ಮತ್ತು ಇತರೆ ದಾಖಲೆಗಳ ನಕಲುಗಳನ್ನು ಒಟ್ಟಾಗಿ ನಿಪಿ-14 ಎಂದು, ಓಎಸ್-64/14 ರ ರಾಜೀ ಅರ್ಜಿಯ ಧೃಡೀಕೃತ ನಕಲನ್ನು ನಿಪಿ-15 ಎಂದು, ದಿನಾಂಕ ಃ 27-02-2015 ರ ಸ್ವಾಧೀನ ರಹಿತ ಕ್ರಯದ ಕರಾರಿನ ರದ್ದಾಯಿತಿ ಪತ್ರದ ಧೃಡೀಕೃತ ಪತ್ರವನ್ನು ನಿಪಿ-16 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನ ತೆರಿಗೆ ಚಲನ್‌ನ್ನು ನಿಪಿ-17 ಎಂದು, ತೆರಿಗೆ ಲೆಕ್ಕ ಪಟ್ಟಿಯನ್ನು ನಿಪಿ-18 ಎಂದು, ನಮ್ಮ ಬೀಜ, ಕೀಟನಾಶಕ ಮತ್ತು ಗೊಬ್ಬರದ ವ್ಯವಹಾರಕ್ಕೆ ಸಂಬಂಧಪಟ್ಟ 8 ಇನವೈಯಸ್‌ಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿ-19 ರಿಂದ ನಿಪಿ-26 ಎಂದು ಗುರುತಿಸಲಾಯಿತು. ನಮ್ಮ ಅಂಗಡಿಯ 6 ಪೋಟೋಗಳನ್ನು ಹಾಜರುಮಾಡಿದ್ದು, ಅದಕ್ಕೆ ನಿಶಾನೆ ಅಂತಾ ಗುರುತಿಸಲು ಪ್ರತಿವಾದಿ ಪರ ವಕೀಲರು ನೆಗೆಟಿವ್ ಇಲ್ಲ ಅಂತಾ ತಕರಾರು

ಮಾಡುತ್ತಾರೆ, ಅವರ ತಕರಾರಿಗೆ ಒಳಪಟ್ಟು ಫೋಟೋಗಳನ್ನು ನಿಪಿ-27 ರಿಂದ 32 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿಗೆ ನಮ್ಮ ವಕೀಲರ ಮುಖಾಂತರ ಕಳುಹಿಸಿದ 2 ನೋಟೀಸಗಳ ಕಚೇರಿ ಪ್ರತಿಗಳನ್ನು ನಿಪಿ-33 ಮತ್ತು 34, ಒಂದು ಕೋರಿಯರ್ ರಸೀದಿಯನ್ನು ನಿಪಿ-35 ಎಂದು ಗುರುತಿಸಲಾಯಿತು. ದಾವಾ ಆಸ್ತಿಯ ಖಾತಾ ನಕಲನ್ನು ನಿಪಿ-36 ಎಂದು ಗುರುತಿಸಲಾಯಿತು. ಕೂಡ್ಲಿಗಿ ಪಿಎಸ್ಐ ಅವರಿಗೆ ಕೊಟ್ಟ ಅರ್ಜಿಯ ನಕಲನ್ನು ಹಾಜರುಮಾಡಿದ್ದು, ಅದಕ್ಕೆ ಸ್ವೀಕೃತಿ ಹಿಂಬರಹ ಹಾಕಿಲ್ಲ ಅಂತಾ ಪ್ರತಿವಾದಿ ವಕೀಲರು ತಕರಾರು ಮಾಡುತ್ತಾರೆ. ಸದರಿ ತಕರಾರಿಗೆ ಒಳಪಟ್ಟು ದಾಖಲೆಗಳನ್ನು ನಿಪಿ-37 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷೀಯು ದಿನಾಂಕ ೩ 08-09-2005 ರ ಕ್ರಯದ ಕರಾರು ಪತ್ರವನ್ನು ಹಾಜರು ಮಾಡಿದ್ದು, ಶ್ರೀ ಎ ಎಸ್ ಆರ್ ಮತ್ತು ಶ್ರೀ ಕೆ ಜೆ ಜಿ ವಕೀಲರು ಅದರ ಸ್ಟಾಂಪ್ ಡ್ಯೂಟಿ ಮತ್ತು ಪೆನಾಲ್ಟಿ ಬಗ್ಗೆ ತಕರಾರು ವ್ಯಕ್ತಪಡಿಸುತ್ತಾರೆ. ಸದರಿ ದಾಖಲೆ ಬಗ್ಗೆ ವಾದ ಕೇಳಿ ತೀರ್ಮಾನಿಸಲಾಗುವುದು ಸಾಕ್ಷೀಯ ಮುಂದುವರೆದ ಮುಖ್ಯವಿಚಾರಣೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.